# ಎಂಥಾ ಬಲವಂತನೋ ಕುಂತಿಯ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
4. **Note:** The wordings mentioned without highlights are as per Ref. 1. The wordings in Ref. 2 and Ref. 3 are similar to Ref. 1 except few differences which are marked in yellow highlights.
5. **Note:** Lyrics followed by the singer are matching wordings in Ref. 3.

ರಾಗ: ಶಹನ                    ತಾಳ: ಆದಿ

ಎಂಥಾ ಬಲವಂತನೋ
ಕುಂತಿಯ (ಸುಜಾತಾನೋ) (ಸಂಜಾತನೋ)
ಭಾರತಿಗೆ ಕಾಂತನೋ
ನಿತ್ಯ ಶ್ರೀಮಂತನೋ    ॥ ಪ ॥

ರಾಮಚಂದ್ರನ ಪ್ರಾಣನೋ
ಅಸುರ ಹೃದಯ ಬಾಣನೋ
ಖಳರ ಗಂಟಲ ಗಾಣನೋ
ಜಗದೊಳಗೆ ಪ್ರವೀಣನೋ    ॥ ೧ ॥

ಕುಂತಿಯ ಕಂದನೋ
ಸೌಗಂಧಿಕವ ತಂದನೋ
ಕುರುಕ್ಷೇತ್ರಕೆ ಬಂದನೋ
ಕೌರವರ ಕೊಂದನೋ    ॥ ೨ ॥

ಬಂಡಿ ಅನ್ನವನುಂಡನೋ
ಬಕನ ಪ್ರಾಣವ ಕೊಂಡನೋ
ಭೀಮ ಪ್ರಚಂಡನೋ
ದ್ರೌಪದಿಗೆ ಗಂಡನೋ    ॥ ೩ ॥

ವೈಷ್ಣವಾಗ್ರಗಣ್ಯನೋ
ಸಂಚಿತಾಗ್ರ ಪುಣ್ಯನೋ
ದೇವಾ ವರೇಣ್ಯನೋ
ದೇವಾ ಶರಣ್ಯನೋ    ॥ ೪ ॥

ಮಧ್ವ ಶಾಸ್ತ್ರವ ರಚಿಸಿದನೋ
ಸದ್ವೈಷ್ಣವರ ಸಲಹಿದನೋ
ಉಡುಪಿ ಕೃಷ್ಣನ ನಿಲಿಸಿದನೋ
ಪುರಂದರ ವಿಠಲನ (ದಾಸನೋ) (ಒಲಿಸಿದನೋ)    ॥ ೫ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಸೌಗಂಧಿಕವ** – ತುಂಬ ಸುವಾಸನೆಯುಳ್ಳ ಹೂವು; ದ್ರೌಪದಿಯು ಅದನ್ನು ಬಯಸಿದಾಗ ಭೀಮನು ಅದನ್ನು ಗಂಧಮಾದನ ಪರ್ವತದಿಂದ ತಂದುಕೊಟ್ಟ ಕಥೆಯಿದೆ.

**ಕುರುಕ್ಷೇತ್ರಕೆ** – ಯುದ್ಧಭೂಮಿಗೆ.

**ಭಂಡಿ ಅನ್ನವನುಂಡನೊ** – ಏಕಚಕ್ರ ಪುರದಲ್ಲಿ ಪಾಂಡವರು ಅಜ್ಞಾತವಾಸ ಮಾಡುವಾಗ ಭೀಮನು ಬಕಾಸುರನನ್ನು ಕೊಂದ ಸಂದರ್ಭದಲ್ಲಿ ಬಕಾಸುರನಿಗಾಗಿ ಗ್ರಾಮದವರು ಕಳುಹಿಸಿದ್ದ ಒಂದು ಬಂಡಿ ತುಂಬ ಅನ್ನವನ್ನು ಭೀಮನು ತಿಂದದ್ದು ಅದರಿಂದ ಬಕಾಸುರನು ಸಿಟ್ಟಿಗೆದ್ದದ್ದು ಇಲ್ಲಿನ ಕಥೆ.

**ಭಾರತಿ ದೇವಿಗೆ ಕಾಂತನೊ** = ದ್ರೌಪದಿ ಸೋಮ ವಂಶದ ದ್ರುಪದ ರಾಜನ ಮಗಳು. ಯಜ್ಞಕುಂಡದಲ್ಲಿ ಹುಟ್ಟಿದುದರಿಂದ ಇವಳು ಅಯೋನಿಜೆ. ಇವಳಿಗೆ ಕೃಷ್ಣೆ ಎಂಬ ಹೆಸರು ಇದೆ. ಇವಳನ್ನು ಸ್ವಯಂವರದಲ್ಲಿ ಗೆದ್ದು ಪಾಂಡವರು ಮದುವೆಯಾದರು. ಇಡಿಯ ಭಾರತ ಯುದ್ಧವು ದ್ರೌಪದಿ ಗಾದ ಅಪಮಾನದ ಸೇಡು ತೀರಿಸಿಕೊಳ್ಳುವುದರ ಇತಿಹಾಸವಾಗಿದೆ. ಇವಳು ಭಾರತೀದೇವಿಯ ಅವತಾರವಾಗಿದ್ದಾಳೆ.

**ಶ್ರೀಮಂತನೋ** = ಪ್ರಭಾವಶಾಲಿಯೋ

**ವೈಷ್ಣವಾಗ್ರಗಣ್ಯ** = ವಿಷ್ಣು ಭಕ್ತರಲ್ಲಿ ಶ್ರೇಷ್ಠ. ವಾಯು ದೇವರು ತಮ್ಮ ಮೂರು ಅವತಾರಗಳಲ್ಲಿ ವೈಷ್ಣವಾಗ್ರಗಣ್ಯ ರೆನಿಸಿಕೊಂಡಿದ್ದಾರೆ.

**ಸಂಚಿತಾಗ್ರ ಪುಣ್ಯ** = ಪೂರ್ವ ಪುಣ್ಯವನ್ನು ಬಲಿಸಿಕೊಂಡವ

**ದೇವಾ ವರೇಣ್ಯ** = ದೇವತೆಗಳಲ್ಲಿ ಶ್ರೇಷ್ಠ (ವಾಯು ದೇವರು ಕಕ್ಷ ೩ ರಲ್ಲಿ ಇದ್ದಾರೆ)

**ಮಧ್ವಶಾಸ್ತ್ರವ ರಚಿಸಿದನೊ** – ಮಧ್ವಾಚಾರ್ಯರಾಗಿ ಅವತರಿಸಿ; ಹನುಮ–ಭೀಮ–ಮಧ್ವ ಎಂಬ ಅವತಾರ ತ್ರಯದ ಕಲ್ಪನೆ ಹಿನ್ನೆಲೆಯಲ್ಲಿದೆ. ವಾಯು ದೇವರು ಮೂರನೆಯ ಅವತಾರದಲ್ಲಿ ಶ್ರೀ ಮಧ್ವಾಚಾರ್ಯರಾಗಿ ದ್ವೈತ ಶಾಸ್ತ್ರವನ್ನು ರಚಿಸಿದರು.

**ಉಡುಪಿ ಕೃಷ್ಣನ ನಿಲಿಸಿದನೊ** – ಹಡಗಿನಲ್ಲಿ ಭಾರಕ್ಕೆಂದು ಹೊತ್ತು ತರುತ್ತಿದ್ದ ಗೋಪೀಚಂದನ ಗಡ್ಡೆಯೊಂದರಲ್ಲಿ ಕೃಷ್ಣನ ಶಾಲಗ್ರಾಮ ಶಿಲಾಮೂರ್ತಿಯನ್ನು ಮಧ್ವಾಚಾರ್ಯರು ಪಡೆದುಕೊಂಡು ಸಮುದ್ರ ತೀರದಿಂದ ತಾವೇ ಅದನ್ನು ಮೂರು ಮೈಲು ಹೊತ್ತುತಂದು ಉಡುಪು ಎಂಬಲ್ಲಿ, ಅನಂತೇಶ್ವರನ ಗುಡಿಯ ಬಳಿ, ಇದನ್ನು ಪ್ರತಿಷ್ಠೆ ಮಾಡಿದರೆಂದು ಉಡುಪಿಯ ಸ್ಥಳ ಪುರಾಣ.

**Classification:** Keerthane
**Ankita:** purandara vittala
**Location:** Udupi, Karnataka
**Category:** Hanuma Stuti
**Group Words:** hanuma, kunti, Bharati, srimanta, rama, asura, hrudaya, kaurava, anna, bhima, draupadi, pati, punya, deva, madhva, krishna,
**Pravachana:** NA